ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 :** **ದಿನಾಂಕ: 23–4–2015**

## ಪತ್ರಿಕಾ ಆಮಂತ್ರಣ

| | | | |
|---|---|---|---|
| 1. | ಡಾ. ರಾಜ್‌ಕುಮಾರ್ 87ನೇ ಜನ್ಮ ದಿನಾಚರಣೆ : (ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ)<br><br>ಉದ್ಘಾಟನೆ:<br><br>ಶ್ರೀ ಆರ್. ರೋಷನ್ ಬೇಗ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಸಚಿವರು.<br><br>ಅಧ್ಯಕ್ಷತೆ:<br><br>ಶ್ರೀ ದಿನೇಶ್ ಗುಂಡೂರಾವ್, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು.<br><br>ಮುಖ್ಯ ಅತಿಥಿಗಳು:<br><br>ಶ್ರೀ ಆರ್. ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು.<br><br>ಪ್ರಧಾನ ಭಾಷಣ:<br><br>ಡಾ. ಕೆ. ಮರುಳಸಿದ್ದಪ್ಪ, ಖ್ಯಾತ ಸಾಹಿತಿಗಳು | **24-04-2015**<br>ಶುಕ್ರವಾರ<br>ಸಂಜೆ<br>6–15 ಗಂಟೆಗೆ | ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅರಮನೆ ರಸ್ತೆ, ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ
## ಗಣತಿ ಕಾರ್ಯ ಪೂರ್ಣಗೊಳಿಸಲು ಮೀಸಲು ಸಿಬ್ಬಂದಿ ಬಳಕೆ : ಕಾಂತರಾಜು

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೆ ನಿಯೋಜಿಸಲಾಗಿರುವ 1.26 ಲಕ್ಷ ಗಣತಿದಾರರೊಂದಿಗೆ ಹೆಚ್ಚುವರಿ ಶೇ. 5 ರಷ್ಟು ಮೀಸಲು ಸಿಬ್ಬಂದಿಯನ್ನೂ ಬಳಸಿಕೊಂಡು ಸಮೀಕ್ಷೆ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ, ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕಾಂತರಾಜು ಅವರು ತಿಳಿಸಿದ್ದಾರೆ.

ಇಂದು ಪತ್ರಕರ್ತರೊಂದಿಗೆ ಸಮೀಕ್ಷೆಯ ಪ್ರಗತಿ ಕುರಿತು ಮಾತನಾಡಿದ ಅವರು ಗಣತಿ ಕಾರ್ಯವನ್ನು ಈ ತಿಂಗಳಾಂತ್ಯಕ್ಕೆ ಪೂರ್ಣಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ಅದರಂತೆಯೆ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಿಗದಿತ ಸಮಯದೊಳಗೆ ಗಣತಿ ಕಾರ್ಯ ಮುಗಿಸುವುದಾಗಿ ಭರವಸೆ ವ್ಯಕ್ತ ಪಡಿಸಿದ್ದಾರೆ ಎಂದರು.

ಸಮೀಕ್ಷೆಯು 12 ದಿನಗಳನ್ನು ಪೂರ್ಣಗೊಳಿಸಿದ್ದು, ಪ್ರಸ್ತುತ 43,11,202 ಕುಟುಂಬಗಳ ಆರ್ಥಿಕ, ಸಮಾಜಿಕ ಹಾಗೂ ಶೈಕ್ಷಣಿಕ ಮಾಹಿತಿ ಸಂಗ್ರಹಿಸಲಾಗಿದೆ. ಅದರಲ್ಲಿ ಅತಿ ಹೆಚ್ಚು ಅಂದರೆ ಶೇ. 63.51 ರಷ್ಟು ಮಾಹಿತಿ ಸಂಗ್ರಹ ಮಾಡಿರುವ ಜಿಲ್ಲೆ ರಾಮನಗರವಾಗಿದ್ದು, ಎರಡನೇ ಸ್ಥಾನದಲ್ಲಿ ಶಿವಮೊಗ್ಗ (47.19 %), ನಂತರ ಬಳ್ಳಾರಿ (47.16 %) ಹಾಗೂ ತುಮಕೂರು (44.99 %) ಜಿಲ್ಲೆಗಳಲ್ಲಿ ಮಾಹಿತಿ ಸಂಗ್ರಹವಾಗಿದೆ ಎಂದರು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ಎಲ್ಲಕ್ಕಿಂತ ಕಡಿಮೆ ಅಂದರೆ ಶೇ. 20.91 ರಷ್ಟು ಕುಟುಂಬಗಳ ಸಮೀಕ್ಷಾ ಮಾಹಿತಿ ಸಂಗ್ರಹವಾಗಿದೆ ಎಂದು ಕಾಂತರಾಜು ತಿಳಿಸಿದರು.

ಸಮೀಕ್ಷೆ ಪ್ರಕ್ರಿಯೆ, ಸಮಸ್ಯೆಗಳ ಕುರಿತು ಒಟ್ಟು 124 ಲಿಖಿತ ದೂರುಗಳು ಹಾಗೂ 4,941 ದೂರವಾಣಿ ದೂರುಗಳು ಸ್ವೀಕೃತವಾಗಿದ್ದು, ಪ್ರಮುಖವಾಗಿ ಗಣತಿದಾರರು, ಪೆನ್ಸಿಲ್‌ನಲ್ಲಿ ಮಾಹಿತಿ ಬರೆದುಕೊಳ್ಳುತ್ತಿರುವುದು, ಅಪೂರ್ಣ ಮಾಹಿತಿ ಪಡೆದುಕೊಳ್ಳುತ್ತಿರುವುದು, ತಮ್ಮ ಬದಲಾಗಿ ಬೇರೊಬ್ಬರನ್ನು ಗಣತಿ ಕಾರ್ಯಕ್ಕೆ ನಿಯೋಜಿಸುವುದು, ಕುಟುಂಬ ಸದಸ್ಯರು ಇಲ್ಲದಿದ್ದಲ್ಲಿ ಕೆಲಸಗಾರರಿಂದ ಮಾಹಿತಿ ಪಡೆದು ನಮೂದಿಸುವುದು, ಮನೆ ಬಾಗಿಲಿಗೆ ಹೋಗದೇ ಮಾಹಿತಿ ಸಂಗ್ರಹ ಮಾಡುವುದು ಹಾಗೂ ಎಲ್ಲ 55 ಪ್ರಶ್ನೆಗಳಿಗೂ ಮಾಹಿತಿ ಪಡೆದುಕೊಳ್ಳದೇ ಕೇವಲ ಸಹಿ ಮಾಡಿಸಿಕೊಂಡು ಹೋಗುವುದು ಸೇರಿದಂತೆ ಇತರೆ ದೂರುಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ ಎಂದರು.

ಗಣತಿ ಕಾರ್ಯ ಸಂಪೂರ್ಣಗೊಂಡ ನಂತರ, ತಾತ್ಕಾಲಿಕ ಗಣತಿ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸಾರ್ವಜನಿಕರು ಈ ಮಾಹಿತಿಯನ್ನು ಪರಿಶೀಲಿಸಿ ತಪ್ಪುಗಳಿದ್ದಲ್ಲಿ ತಿದ್ದುಪಡಿಗೆ ಇಲಾಖೆಗೆ ತಿಳಿಸಬೇಕು ಎಂದವರು ಹೇಳಿದರು.

ಸಾರ್ವಜನಿಕರಲ್ಲಿ ಸಮೀಕ್ಷೆಯ ಹಾಗೂ ಅದರ ಉದ್ದೇಶದ ಬಗ್ಗೆ ನಂಬಿಕೆ ಮೂಡುವಂತೆ ಗಣತಿದಾರರು ನಿಖರ ಮಾಹಿತಿಯನ್ನು ನಿಗದಿತ ರೀತಿಯಲ್ಲೇ ಸಂಗ್ರಹಿಸಬೇಕು ಹಾಗೂ ಯಾವುದೇ ಅನುಮಾನ ಅಥವಾ ಕಾರ್ಯ ನ್ಯೂನತೆಗಳಿಗೆ ಆಸ್ಪದ ನೀಡದಂತೆ ನೋಡಿಕೊಳ್ಳಬೇಕು ಎಂದು ಕಾಂತರಾಜು ಗಣತಿದಾರರಿಗೆ ಕಿವಿಮಾತು ಹೇಳಿದರು.

ಸಾಮಾಜಿಕ–ಶೈಕ್ಷಣಿಕ–ಆರ್ಥಿಕ ಸಮೀಕ್ಷೆಯು ಸಾರ್ವಜನಿಕರ ಹಾಗೂ ಒಟ್ಟಾರೆ ರಾಜ್ಯದ ಭವಿಷ್ಯಕ್ಕೆ ಒಳಿತು ಮಾಡುವ ಉದ್ದೇಶ ಹೊಂದಿದೆಯಾದ್ದರಿಂದ ಸಾರ್ವಜನಿಕರು ಗಣತಿದಾರರಿಗೆ ನಿಖರ ಹಾಗೂ ನೈಜ ಮಾಹಿತಿ ಒದಗಿಸಿ ಸಹಕರಿಸುವುದು ಅವರ ಆದ್ಯ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಪಹೊ/

## ಮುಖ್ಯಮಂತ್ರಿ ಪ್ರವಾಸ

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಏಪ್ರಿಲ್ 25 ರಂದು ಹಾಸನ ಜಿಲ್ಲೆಗೆ ಪ್ರವಾಸ ಕೈಗೊಂಡು, ಅಲ್ಲಿನ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆಯಲಿರುವ 32 ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು, ನಂತರ ದೊಡ್ಡಬಳ್ಳಾಪುರಕ್ಕೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಾಗಾರಿಗಳ ಶಂಕುಸ್ಥಾಪನೆ ನೆರವೇರಿಸಲಿರುವ ಅವರು ಅಂದೇ ನಗರಕ್ಕೆ ಹಿಂದಿರುಗುವರು.

ಪಹೊ:ಜಿಪಿಆರ್.

## ONE DAY FREE TRAINING CLASS

**Bangalore, April 23, (Karnataka Information)**

**The Mysore Horticultural Society will conduct One Day free training class on Medicinal plants, Diversity and its uses on 25th April 2015 from 2.00 P.M. to 5.00 P.M. in Dr. M.H. Marigowda Memorial Hall, Lalbagh, Bangalore.**

**For details, contact the Secretary, Mysore Horticultural Society, Lalbagh, Bangalore – 4 Phone-26576781 or Mobile : 9845803474/9986737142 .**

**ph:gpr**

## ಕರ್ನಾಟಕ ಭೂ ಕಂದಾಯ ತಿದ್ದುಪಡಿ
## ವಿಧೇಯಕ ವಿಧಾನಸಭೆಯಲ್ಲಿ ಮಂಡನೆ

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ಇಂದು ಬೆಳಿಗ್ಗೆ ಕರ್ನಾಟಕ ವಿಧಾನಸಭೆಯ ಕಲಾಪ ಆರಂಭಗೊಳ್ಳುತ್ತಿದ್ದಂತೆ ರಾಜ್ಯ ಕಂದಾಯ ಸಚಿವ ಶ್ರೀ ವಿ. ಶ್ರೀನಿವಾಸ ಪ್ರಸಾದ್ ಅವರು ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕ –2015 ಅನ್ನು ಮಂಡಿಸಿದರು.

ಪಹೊ:ಬಾಬು:ಜಿಪಿಆರ್.

## ಅಲ್ಪ ಕಾಲಾವಧಿ ಚರ್ಚೆ

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ಇಂದು ವಿಧಾನಸಭೆಯಲ್ಲಿ ನಿಯಮ 69 ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ನಡೆಯಿತು.

ವಿಧಾನಸಭಾ ಸದಸ್ಯರುಗಳಾದ ಶ್ರೀ ಕೆ.ಬಿ. ಪ್ರಸನ್ನಕುಮಾರ್, ಶ್ರೀ ಇ. ತುಕಾರಂ ಮತ್ತು ಡಾ. ಉಮೇಶ್ ಜಿ. ಜಾಧವ್ ಅವರುಗಳು ರಾಜ್ಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವು ಉತ್ತಮ ಪ್ರಗತಿಯಲ್ಲಿ ಇದ್ದರೂ 2014–15ನೇ ಸಾಲಿನ ಕಾಮಗಾರಿಗಳ ಬಿಲ್ಲುಗಳ ಬಾಬ್ತು ಹಾಗೂ ಕೂಲಿಯನ್ನು ಕಳೆದ ಮೂರು ತಿಂಗಳಿನಿಂದ ಪಾವತಿಯಾಗಿರುವುದಿಲ್ಲ ಎಂದು ಈ ಸಂಬಂಧ ಅನುದಾನ ಬಿಡುಗಡೆಯಾಗದೇ ಜನರು ತೊಂದರೆ ಅನುಭವಿಸುತ್ತಿರುವ ವಿಷಯವನ್ನು ಚರ್ಚೆಯಲ್ಲಿ ಪ್ರಸ್ತಾಪಿಸಿದರು. ಈ ಕುರಿತಂತೆ ಹಲವು ಸದಸ್ಯರು ಮಾತನಾಡಿದರು.

ಈ ಚರ್ಚೆಗೆ ಉತ್ತರಿಸಿದ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಶ್ರೀ ಹೆಚ್.ಕೆ. ಪಾಟೀಲ್ ಅವರು ಈ ನಿಟ್ಟಿನಲ್ಲಿ ಒಟ್ಟಾರೆ 280 ಕೋಟಿ ರೂ. ಬಾಕಿ ಇದೆ. 15 ದಿನದಲ್ಲಿ ಕೃಷಿ ಕಾರ್ಮಿಕರಿಗೆ ಕೂಲಿ ಬಾಬ್ತು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ನಾಳೆ ಕೇಂದ್ರ ಸಚಿವರನ್ನು ಭೇಟಿಮಾಡಿ, ಚರ್ಚಿಸಿ ಕೂಡಲೇ ಹಣ ಬಿಡುಗಡೆಗೆ ಒತ್ತಾಯಿಸಲಾಗುವುದು. ಅಲ್ಲದೆ ರಾಜ್ಯದ ಮುಖ್ಯಮಂತ್ರಿಗಳನ್ನು 100 ಕೋಟಿ ರೂ. ಗಳನ್ನು ಬಿಡುಗಡೆಮಾಡಲು ಮನವಿ ಮಾಡಲಾಗುವುದು. ಈಗಾಗಲೇ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಡೆದಿದೆಯೆನ್ನಲಾದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಜ್ಯ ಲೋಕಾಯುಕ್ತದಿಂದ ತನಿಖೆಗೆ ಕ್ರಮ ವಹಿಸಲಾಗಿದೆ ಎಂದು ಸಚಿವರು ಪ್ರಕಟಿಸಿದರು.

ಪಹೊ:ಬಾಬು:ಜಿಪಿಆರ್

## ಡಾ. ರಾಜ್‌ಕುಮಾರ್ : 87ನೇ ಜನ್ಮ ದಿನಾಚರಣೆ

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಡಾ. ರಾಜ್‌ಕುಮಾರ್ 87ನೇ ಜನ್ಮ ದಿನಾಚರಣೆ ಪ್ರಯುಕ್ತ ಏಪ್ರಿಲ್ 24 ರಂದು ಸಂಜೆ 6–15 ಗಂಟೆಗೆ ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ವಾರ್ತಾ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಸಮಾರಂಭದ ಉದ್ಘಾಟನೆಯನ್ನು ನರವೇರಿಸಲಿದ್ದಾರೆ.

ಖ್ಯಾತ ಸಾಹಿತಿಗಳಾದ ಡಾ. ಕೆ. ಮರುಳಸಿದ್ದಪ್ಪ ಅವರು ಕಾರ್ಯಕ್ರಮದ ಪ್ರಧಾನ ಭಾಷಣ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಡಾ. ರಾಜ್‌ಕುಮಾರ್ ಅವರು ನಟಿಸಿರುವ ಚಿತ್ರಗಳ ಗೀತೆಗಳನ್ನು ಸಂಗೀತ ಸಂಯೋಜಕ ಶಬ್ಬೀರ್ ಹಾಗೂ ತಂಡದವರು ಪ್ರಸ್ತುತಪಡಿಸುವರು.

ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವ ಶ್ರೀ ದಿನೇಶ್ ಗುಂಡೂರಾವ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಸಾರಿಗೆ ಸಚಿವ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಆದ ಶ್ರೀ ರಾಮಲಿಂಗಾರೆಡ್ಡಿ, ಬೆಂಗಳೂರು ಕೇಂದ್ರ ಲೋಕಸಭಾ ಸದಸ್ಯ ಶ್ರೀ ಪಿ.ಸಿ. ಮೋಹನ್, ಹಿರಿಯ ಚಿತ್ರೋದ್ಯಮಿ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಿಧಾನ ಪರಿಷತ್ ಸದಸ್ಯೆ ಡಾ. ಜಯಮಾಲಾ ರಾಮಚಂದ್ರ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಶ್ರೀ ಎಸ್.ವಿ. ರಾಜೇಂದ್ರ ಸಿಂಗ್ ಬಾಬು, ಬೆಂಗಳೂರಿನ ಶ್ರೀಕಂಠೀರವ ಸ್ಟುಡಿಯೋ ಅಧ್ಯಕ್ಷ ಶ್ರೀ ವಿಜಯಲಕ್ಷ್ಮಿ ಅರಸು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಶ್ರೀ ಥಾಮಸ್ ಡಿಸೋಜ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ.

ಪಹೊ:ಜಿಪಿಆರ್.

## ಭೂಸೇನಾ ನಿಗಮದ ಅಧ್ಯಕ್ಷರ ಪ್ರವಾಸ

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಹಿಂದಿನ ಭೂಸೇನಾ ನಿಗಮ) ಅಧ್ಯಕ್ಷ ಶ್ರೀ ಶ್ರೀಶೈಲ ಎಂ. ದಳವಾಯಿ ಅವರು ಏಪ್ರಿಲ್ 28 ರವರೆಗೆ ಜಮಖಂಡಿ, ಕುಡಚಿ ಹೊಸದುರ್ಗ, ಚಿಕ್ಕೋಡಿಯಲ್ಲಿ ನಿಗಮದ ಕಾಮಗಾರಿಗಳ ಪರಿವೀಕ್ಷಣೆ ಮಾಡುವರು.

ಪಹೊ/ಕೆಎಂ

# ಆರೋಗ್ಯ ಇಲಾಖೆ: ಆನ್‌ಲೈನ್‌ನಲ್ಲಿ ಅರ್ಜಿ

ಬೆಂಗಳೂರು ಏಪ್ರಿಲ್ 23 (ಕರ್ನಾಟಕ ವಾರ್ತೆ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ **ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಜಿಲ್ಲೆಗಳಲ್ಲಿ ಖಾಲಿ ಇರುವ** 1582 **ಗ್ರೂಪ್'ಡಿ'** ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ದಿನಾಂಕ: 01.04.2015 ರಿಂದ 30.04.2015 ರವರೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ಸದರಿ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ವರ್ಗೀಕರಣ, ಶುಲ್ಕಪಾವತಿಸುವ ವಿಧಾನ ಇತ್ಯಾದಿ ವಿವರಗಳನ್ನು www.karhfw.gov.in/drc.aspx ನಲ್ಲಿ ಪ್ರಕಟಿಸಿರುವ ಅಧಿಸೂಚನೆಯಲ್ಲಿ ನೋಡಬಹುದಾಗಿದೆ ಮತ್ತು ಅರ್ಜಿ ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಗಳಿಗಾಗಿ **ಈ ಕೆಳಕಂಡ ಸಹಾಯವಾಣಿ ದೂರವಾಣಿ ಮತ್ತು ಮೊಬೈಲ್ ಸಂಖ್ಯೆ**-9343733051, 7483121852, 9739894823, 9945895663, 080-22251995, 080-22392668 **ಮತ್ತು** 080-22340197 **ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.**

**ಪಹೊ/ಕೆಎಂ**